ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಬುಧವಾರ, ದಿನಾಂಕ : 03 ನೇ ಫೆಬ್ರುವರಿ, 2021

ಕೃಷಿ ಇಲಾಖೆಯ ಆವರ್ತ ನಿಧಿ ಬಗ್ಗೆ

ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

258 (371) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಆವರ್ತ ನಿಧಿ ಎಂದರೇನು ; ಕೃಷಿ ಇಲಾಖೆಯಲ್ಲಿ ಆವರ್ತ ನಿಧಿ ಹಾಗೂ ಇತರೆ ನಿಧಿಗಳನ್ನು ಸರ್ಕಾರ ಸ್ಥಾಪಿಸಿದೆಯೇ ; ಸ್ಥಾಪಿಸಿದಲ್ಲಿ ಯಾವ ಯಾವ ನಿಧಿಗಳನ್ನು ಯಾವ ಉದ್ದೇಶಗಳಿಗಾಗಿ ಸ್ಥಾಪನೆ ಮಾಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ನಿಧಿಗಳಿಂದ ಹಣವನ್ನು ಪಡೆದ ಏಜೆನ್ಸಿಗಳು, ಉದ್ಯಮಿಗಳು, ವ್ಯಾಪಾರಗಾರರು, ರೈತರು ಹಾಗೂ ಇತರರು ಯಾರ್ಯಾರು ; ಯಾವ ವರ್ಷಗಳಲ್ಲಿ ಎಷ್ಟು ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಂಡಿದ್ದಾರೆ ; (ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ನಿಧಿಗಳಿಂದ ಹಣವನ್ನು ಪಡೆಯಲು ಇರುವ ಮಾರ್ಗಸೂಚಿಗಳೇನು ; ಯಾರ್ಯಾರು ಪಡೆಯಬಹುದು ; (ವಿವರವಾದ ಮಾಹಿತಿ ಕೊಡುವುದು)

(ಈ) ಸದರಿ ಆವರ್ತ ಹಾಗೂ ಇತರೆ ನಿಧಿಗಳಲ್ಲಿ ಪಡೆದುಕೊಂಡ ಹಣವನ್ನು ಉದ್ಯಮಿದಾರರು ಹಾಗೂ ಇತರರು ಸರಿಯಾಗಿ ಪಾವತಿ ಮಾಡಿದ್ದಾರೆಯೇ ; ಮಾಡಿಲ್ಲವಾದರೆ, ಬಾಕಿ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಉ) ಇದರ ಸಂಬಂಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?